ಶ್ರೀ ಬಿ. ಎಂ. ಪಾಟೀಲ್.—ಡಿವಿಜನಲ್ ಕಮೀಷನರವರು ಕೆಲವು ಕಡೆ ಮಾಟಿಂಗುಗಳನ್ನು ನಡೆಸದೆ ಇದ್ದಕಾರಣ ಅಂಥ ಕಡೆ ಅವರು ಪ್ರೋಕಾಸ್ ನೋಟೀಸುಗಳನ್ನು ಕೊಟ್ಟಿರಬಹುದು. ಆದರೆ ಕೆಲವು ಕಡೆ ರೆಗ್ಯುಲರ್ ಮಾಟಿಂಗುಗಳಾಗಿಲ್ಲ. ಅಡ್ಜೆರನ್ಡ್ ಮಾಟಿಂಗುಗಳಾಗಿವೆ.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಟೌನ್ ಮುನಿಸಿಪಲ್ ಆಕ್ಟ್ ಪ್ರಕಾರ ಅನ್ಯುಯಲ್ ಜನರಲ್ ಬಾಡಿ ಮೀಟಿಂಗ್ ಮತ್ತು ಮಾಸಿಕ ಸಭೆಗಳನ್ನು ಕಡ್ಡಾಯವಾಗಿ ಕರೆಯಬೇಕು. ಆ ಮೀಟಿಂಗ್ ನಲ್ಲಿ ಆಗುವಂಥ ನಡವಳಿಕೆಗಳನ್ನು ಪ್ರೊಸೀಡಿಂಗ್ಸನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಡಬೇಕೆಂಬ ಕಾನೂನು ಇರುವಾಗ ಸುಮಾರು 7 ತಿಂಗಳಿಂದಲೂ ಅವರು ಈ ಮಾಸಿಕ ಸಭೆಯನ್ನು ನಡೆಯಿಸದೇ ಇರುವುದರಿಂದ ಅವರ ಮೇಲೆ ಜಿಲ್ಲಾಧಿಕಾರಿಗಳು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಬಿ. ಎಂ. ಪಾಟೀಲ್.—ಜಿಲ್ಲಾಧಿಕಾರಿಗಳ ವರದಿ ಮೇಲೆ ಸರ್ಕಾರ ಸೂಪರ್‌ಸೀಡ್ ಮಾಡಿದೆ. ಈ ಕ್ರಮ ತೆಗೆದುಕೊಂಡಿದೆ.

Sri H. SIDDAVEERAPPA.—What is the name of the Municipal President concerned and to which party he belongs ?

Sri B. M. PATIL.—I do not know, Sir. That information is not with me.

ಶ್ರೀ ಕೆ. ಪ್ರಭಾಕರ್.—ಇದರಲ್ಲಿ ಮಂತ್ರಿಗಳು ಉತ್ತರ ಹೇಳುತ್ತ ಪೋಸ್ಟ್‌ಪೋನ್ಡ್ ಮೀಟಿಂಗ್ ಆಗಿದೆ ಎಂದು ಹೇಳಿದ್ದಾರೆ. ಒಂದೇ ಮೀಟಿಂಗ್ ಎಷ್ಟು ಸಾರಿ ಪೋಸ್ಟ್‌ಪೋನ್ಡ್ ಆಗಿದೆ ?

ಶ್ರೀ ಬಿ. ಎಂ. ಪಾಟೀಲ್.—ಒಂದೇ ಮೀಟಿಂಗ್ ಬಹಳ ಸಾರಿ ಪೋಸ್ಟ್‌ಪೋನ್ ಆಗಿಲ್ಲ. ಆ ಮೀಟಿಂಗ್ ಅನಿವಾರ್ಯವಾಗಿ ಪೋಸ್ಟ್‌ಪೋನ್ ಮಾಡಿದ್ದಾರೆ. ಅಂತಹ ಪ್ರಸಂಗ ಬಂದಿದೆ. ಮತ್ತೆ ಮೀಟಿಂಗ್ ಕರೆದಿದ್ದಾರೆ. ಕಾರ್ಯಕಲಾಪಗಳು ನಡೆದಿವೆ.

ಶ್ರೀ ಜಿ. ದುಗ್ಗಪ್ಪ.—ಆ ನಗರಸಭೆಯ ಅಧ್ಯಕ್ಷರು ಸಭೆಯ ಮೀಟಿಂಗನ್ನು ಕರೆಯುವುದಿಲ್ಲ. 1964ನೇ ಮುನಿಸಿಪಲ್ ಆಕ್ಟ್ 47ನೇ ಸೆಕ್ಷನ್ ಪ್ರಕಾರ ಕಡ್ಡಾಯವಾಗಿ ಮೀಟಿಂಗ್ ಕರೆಯಬೇಕು. ಈ ವಿಚಾರದ ಬಗ್ಗೆ ಡೆಪ್ಯುಟಿ ಕಮಿಷನರ್‌ಗೆ ಹೇಳಿದರೂ ಕ್ರಮ ತೆಗೆದುಕೊಳ್ಳಲಿಲ್ಲ. ಡಿವಿಷನಲ್ ಕಮಿಷನರಿಗೆ ಹೇಳಿದರೂ ಕ್ರಮ ತೆಗೆದುಕೊಳ್ಳಲಿಲ್ಲ. ಮಾನ್ಯ ಸ್ಪೀಕರಿತರಾದ ಹುಕಾಸಿನ ಮಂತ್ರಿಗಳಿಗೆ ಹೇಳಿದರೂ ಕ್ರಮ ತೆಗೆದುಕೊಳ್ಳಲಿಲ್ಲ. ಆದ್ದರಿಂದ ಈಗಲಾದರೂ ಮಾನ್ಯಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳಿದ್ದಕ್ಕೆ ಮಂತ್ರಿಗಳು ಅದನ್ನು ಸೂಪರ್‌ಸೀಡ್ ಮಾಡಲಾಗಿದೆಯೆಂಬುದಾಗಿ ಹೇಳಿದ್ದಾರೆ. ಅಂದಮೇಲೆ ಅಲ್ಲಿ ಆಗಿರುವ ಖರ್ಚುಗಳ ಬಗ್ಗೆ ಅದನ್ನು ವಸೂಲು ಮಾಡಲು ಸಾಧ್ಯವಾದಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಬಿ. ಎಂ. ಪಾಟೀರ್.—ಸಾಧ್ಯವಾದಷ್ಟು ಮಾಡಿದ್ದೇವೆ. ಅಲ್ಲಂದ ಪ್ರತಿನಿಧಿಸಿರತಕ್ಕ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಕ್ರಮ ತೆಗೆದುಕೊಂಡಿದೆ.

## Selling rate of Jaggery prevailing in Bidar District

341. Sri V. N. PATIL (Humnabad).—

Will the Minister of State for Food and Civil Supplies be pleased to state :—

(*a*) the selling rate of jaggery in Bidar District prevailing now and during the months of January to the end of June, 1969 ;

(*b*) the selling rate of jaggery during the corresponding months in the years 1967 and 1968 ;

(*c*) the reasons for the fall of the selling rate of jaggery ;

(*d*) the steps taken to support the price line to fetch a remunerative price to the agriculturists ?

Sri B. VITHALDAS SHETTY (Minister of State for Food and Civil Supplies).—

(*a*) Rs. 45 to Rs. 72 per quintal, depending upon the quality. The prices prevailing in the months of January 1969 to June 1969 are as in Statement "A" appended.

(*b*) As in Statement "B" appended.

(*c*) (1) Increase in the production ;
(2) Restrictions on the export of jaggery ;
(3) Increase in the quota of levy sugar to the State ;
(4) Lack of local demand on account of better availability of sugar ;
(5) Import of gur from the neighbouring States by trade.

(*d*) Due to lack of demand and the restrictions on the export of gur, heavy accumulations were noticed in gur markets, not only in Bidar District, but in other major gur producing Districts like Belgaum and Bellary. This led to the fall in the price of sugar in local markets. Considering the hardship caused to the growers the restrictions on the export of gur were relaxed from time to time and the relaxation is in force.

STATEMENT 'A'

Statement showing the selling rate of Jaggery in Bidar District prevailing during the months of January 1969 to end of June 1969.

| Sl. No. | Month | 1969 | | |
|---|---|---|---|---|
| | | Gur I Qty. | Gur II Quality | Gur III Quality |
| 1 | January | 106 | 97 | 76 |
| 2 | February | 90 | 85 | 65 |
| 3 | March | 82 | 72 | 62 |
| 4 | April | 68 | 62 | 50 |
| 5 | May | 59 | 52 | 42 |
| 6 | June | 72 | 58 | 35 |
| 7 | July | 72 | 55 | 45 |

(SRI B. VITHALDAS SHETTY)

STATEMENT 'B'

Statement showing the selling rate of Jaggery during the corresponing months in the years 1967 and 1968.

| Sl. No. | Month | 1967 | | | 1968 | | |
|---|---|---|---|---|---|---|---|
| | | Gur I Qty. | Gur II Qty. | Gur III Qty | Gur I Qty. | Gur II Qty. | Gur III Qty. |
| 1 | January ... | 92 | 88 | 84 | 152 | 145 | 129 |
| 2 | February ... | 100 | 92 | 85 | 141 | 133 | 123 |
| 3 | March ... | 108 | 100 | 98 | 155 | 138 | 130 |
| 4 | April ... | 125 | 114 | 109 | 185 | 175 | 165 |
| 5 | May ... | 148 | 138 | 126 | 193 | 177 | 160 |
| 6 | June ... | 180 | 173 | 162 | 186 | 175 | 162 |

Sri V. N. PATIL.—In view of the fact that the rate of jaggery has come down from Rs. 180 in the year 1967 to Rs. 45 now, and the actual rate at which the jaggery is being sold is only Rs. 25 per quintal, what steps the Government has taken to support the price?

† Sri B. VITHALDAS SHETTY.—Recently we have relaxed the export policy in respect of Bidar, Gulbarga and some other districts whereby the merchants are allowed to export jaggery to Maharashtra.

Sri V. N. PATIL.—I would like to know what material benefits the agriculturists have got on account of this policy?

Sri B. VITHALDAS SHETTY.—It is not on account of the State Government's policy. The price of the jaggery is linked with the sugar market. Formerly the sugar rate was high and now it has come down. Since the sugar rate has fallen the rate of jaggery has also come down.

Sri V. N. PATIL.—May I know whether at the present rate at which the jaggery is being sold, the agriculturist is able to meet the cost of production of jaggery and if not, what steps the Government will take to see that the electricity charges and other charges are brought down?

Sri B. VITHALDAS SHETTY.—The sugar cultivating area has increased in these districts.

ಶ್ರೀ ಎನ್. ಎ. ಜನ್ನೇಗೌಡ.—ಒಂದು ಎಕರೆ ಕಬ್ಬು ಬೆಳೆಯುವುದಕ್ಕೆ 3 ಸಾವಿರ ರೂಪಾಯಿಗಳು ಖರ್ಚಾಗುತ್ತದೆಂದು ಹೇಳಿದರೆ ಸುಮಾರು 900 ರೂಪಾಯಿಗಳು ಮಾತ್ರ ರೈತರಿಗೆ ಬರುತ್ತದೆ. ಅಂತಹ ಸಂದರ್ಭದಲ್ಲಿ ರೈತರಿಗೆ ಸರ್ಕಾರದವರು ಸಬ್ಸಿಡಿ ಕೊಡುತ್ತಾರೆಯೇ? ಅಥವಾ 4 ಜಿಲ್ಲೆಗಳಿಂದ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ? ಅದು ಸಿರೋನ್‌ಗೆ ಹೋಗುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ವಿಟ್ಠಲದಾಸ್ ಶೆಟ್ಟಿ.—4 ಜಿಲ್ಲೆಗಳಿಂದ ಹೊರಗಡೆಗೆ ಅದನ್ನು ಕೊಂಡೊಯ್ಯುವುದಕ್ಕೆ ಅನುಮತಿ ಬೇಕೆಂದು ವ್ಯಾಪಾರಸ್ಥರು ಮತ್ತು ಡಿಪ್ಯುಟಿ ಕಮಿಷನರ್ ಹೇಳಿದ್ದಾರೆ. ಬಾಕಿಯುವರಿಂದಲೂ ಅರ್ಜಿ ಬಂದರೆ, ಸರ್ಕಾರ ಅದನ್ನೂ ಪರಿಶೀಲಿಸುತ್ತದೆ.

ಶ್ರೀ ಪಿ. ಎನ್. ಪಾಟೀಲ್.—ಬಿದಾರ್ ಜಿಲ್ಲೆಯಲ್ಲಿ ಬೆಲ್ಲದ ಧಾರಣೆ ಕ್ವಿಂಟಾಲಿಗೆ 185ರಿಂದ 25ಕ್ಕೆ ಬಂದಿದೆ ಎಂದು ಹೇಳಿದ್ದೀರಿ. 1965ರಲ್ಲಿ ಬಿದಾರ್ ಜಿಲ್ಲೆಯಲ್ಲಿ ಎಷ್ಟು ಎಕರೆ ಕಬ್ಬು ಹಾಕಿದ್ದಾರೆ ಅದನ್ನು ಹೇಳುತ್ತೀರಾ ?

ಶ್ರೀ ಬಿ. ವಿಟ್ಠಲ್‌ದಾಸ್ ಶೆಟ್ಟಿ..—ಅದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಏವರ ಕೊಡಬಹುದು.

## Steps to increase the lot of Harijans and other poorer sections of the Society

3 1. Sri P. VENKATAGIRIYAPPA (Kolar).—

Will the Minister for Social Welfare be pleased to state :—

(*a*) whether the Government is aware that discontentment is growing in a rapid speed among the Harijans and the other poorer sections of the rural population as their economic conditions remain unchanged in spite of completion of several Five Year Plans ;

(*b*) whether the Government is aware that the land Legislation such as Inams Abolition Act, Tenancy Act and Land Reforms Act have not brought any relief to these weaker sections of the society ;

(*c*) whether there is any proposal before the Government to take drastic steps to improve the lot of Harijans and the other rural poorer sections of the society ?

Sri V. L. PATIL (Minister for Social Welfare).—

(*a*) to (*c*) In addition to implementing the Plan Schemes and programmes specifically designed for the economic, social and educational advancement of Harijans and other weaker sections of the community, Government is making every effort to see that these classes get the maximum benefit out of the other general schemes of development. These efforts have had a fair impact. Government realises that the problem is stupendous and needs to be tackled continually over a period of time.

ಶ್ರೀ ಪಿ. ವೆಂಕಟಗಿರಿಯಪ್ಪ.—ಸ್ವಾಮಿ, ನಾನು ಕೇಳಿರುವ ಪ್ರಶ್ನೆಗೆ ಕೊಟ್ಟಿರುವ ಉತ್ತರ ತುಂಬಾ ಅಸಂಬದ್ಧವಾಗಿದೆ. ಅದಕ್ಕೆ ಉತ್ತರ ಏನು ಕೊಡುತ್ತೀರಿ, ಸ್ವಾಮಿ !

†ಶ್ರೀ ವಿ. ಎಲ್. ಪಾಟೀಲ್.—ಹರಿಜನರಿಗೆ ಪ್ರಯೋಜನವಾಗಿದೆ. ಏಕೆಂದರೆ ಕೆಲವು ವರ್ಷಗಳಿಂದ ಅವರಿಗೆ ಹಣವನ್ನು ಖರ್ಚು ಮಾಡುತ್ತಿದ್ದೇವೆ. 1966-67ರಲ್ಲಿ ಎರಡು ಕೋಟಿ 20 ಲಕ್ಷ ಚಿಲ್ಲರೆ ಹಣವನ್ನು ಖರ್ಚು ಮಾಡಿದೆ. 1967-68ರಲ್ಲಿ ಎರಡು ಕೋಟಿ 16 ಲಕ್ಷ ಚಿಲ್ಲರೆ ಖರ್ಚು ಮಾಡಿದೆ. 1968-69ರಲ್ಲಿ 2 ಕೋಟಿ 29 ಲಕ್ಷ ಚಿಲ್ಲರೆ ಖರ್ಚಾಗಿದೆ. 1969-70ರಲ್ಲಿ ಎರಡು ಕೋಟಿ 64 ಲಕ್ಷ ಚಿಲ್ಲರೆ ಖರ್ಚು ಮಾಡುತ್ತಿದ್ದೇವೆ.